**ಓ.ಎಸ್. ನಂಃ 324/2017**

**<u>ಪಿಡಬ್ಲ್ಯೂಃ1</u>**

**ದಿನಾಂಕಃ 01.08.2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ರ ಪರ ಶ್ರೀ ಜಿ.ಎಲ್.ಡಿ ವಕೀಲರಿಂದಃ</u>**

1. ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಅಲ್ಪಸ್ವಲ್ಪ ಬರುತ್ತದೆ. ನಾನು ನನ್ನ ಸಹಿಯನ್ನು ಕನ್ನಡದಲ್ಲಿ ಮಾಡುತ್ತೇನೆ ಎಂದರೆ ಸರಿ. ಹಕ್ಕುಖುಲಾಸೆ ಪತ್ರವನ್ನು ರದ್ದು ಮಾಡುವಂತೆ ಕೋರಿ ಈ ದಾವೆಯನ್ನು ನಾನು ಸಲ್ಲಿಸಿರುತ್ತೇನೆ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪಾಲು ಕೇಳಿ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸಾಕ್ಷಿಯು ನಾನು ದಾವಾ ಆಸ್ತಿಗಳಲ್ಲಿ ನನ್ನ ಪಾಲನ್ನು ಸಹ ಕೇಳಿರುತ್ತೇನೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

2. ನನ್ನ ತಂದೆಯವರಿಗೆ ಸೇರಿದ ಎಲ್ಲ ಆಸ್ತಿಗಳನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ನನ್ನ ತಂದೆಗೆ ಸೇರಿದ ಒಟ್ಟು 7 ಎಕರೆ 15 ಗುಂಟೆ ಜಮೀನು ಇದೆ. ನಮ್ಮ ಕುಟುಂಬಕ್ಕೆ ಸೇರಿದ ಎಲ್ಲ ಆಸ್ತಿಗಳನ್ನು ದಿಃ 19.06.1999 ರಂದು ನಿಪಿ.7 ರ ಪ್ರಕಾರ ವಾದಿಯರು, 1 ಮತ್ತು 2 ನೇ ಪ್ರತಿವಾದಿಯರು ಪಾಲುವಿಭಜನೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಿಪಿ.7 ರಲ್ಲಿ ಬರೆಸಿರುವ ಎ ಷೆಡ್ಯೂಲ್ ದಾರನಾದ ನಿಂಗರಾಜೇಗೌಡ ಎಂದರೆ ನಾನೇ ಎಂದರೆ ಸರಿ. ನಿಪಿ.7 ರ ವಿಭಾಗಪತ್ರದಲ್ಲಿ ನನ್ನ ಹಿಸ್ಸೆಗೆ ಬಂದ ಎ ಷೆಡ್ಯೂಲ್ ಆಸ್ತಿಗಳನ್ನು, 2 ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಬಿ ಷೆಡ್ಯೂಲ್ ಆಸ್ತಿಗಳನ್ನು, 2 ನೇ ವಾದಿಯ ಹಿಸ್ಸೆಗೆ ಬಂದ ಸಿ ಷೆಡ್ಯೂಲ್ ಆಸ್ತಿಗಳನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನಿಪಿ.7 ರ ಪ್ರಕಾರ 1 ನೇ ಪ್ರತಿವಾದಿ ಮತ್ತು ನನ್ನ ತಂದೆಯಾದ ಸಿದ್ದೇಗೌಡರ ಹಿಸ್ಸೆಗೆ ಬಂದ ಡಿ ಷೆಡ್ಯೂಲ್ ಆಸ್ತಿಗಳನ್ನು ಮಾತ್ರ ನಾನು ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿ. ನಿಪಿ.7 ರ ವಿಭಾಗ ಪತ್ರದಲ್ಲಿ ಆಯಾ ಹಿಸ್ಸೆದಾರರ ಹಿಸ್ಸೆಗೆ ನೀಡಿದ ಆಸ್ತಿಗಳನ್ನು ಸದರಿ ಹಿಸ್ಸೆದಾರರು ತಮ್ಮ ಇಚ್ಛಾನುಸಾರ ಅನುಭವಿಸತಕ್ಕದ್ದು ಎಂದು ಬರೆದಿರುತ್ತದೆ ಎಂದರೆ ಸರಿ.

3. ನಿಪಿ.7 ರ ಪ್ರಕಾರ ವಿಭಾಗವಾದ ನಂತರ ನಮ್ಮ ಕುಟುಂಬದ ಸದಸ್ಯದ ಮಧ್ಯೆ ಕೇವಲ ರಕ್ತಸಂಬಂದ ಮಾತ್ರ ಇರುತ್ತದೆ ವಿನಃ ಆಸ್ತಿಗಳ ಪೈಕಿ ಯಾವುದೇ ಸಂಬಂದವಿರುವುದಿಲ್ಲ ಎಂದು

ಬರೆದಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆ ತಾಯಿಯ ಮರಣದ ನಂತರ ಅವರ ಹಿಸ್ಸೆಗೆ ಹೋದ ಆಸ್ತಿಗಳು ನಮಗೆ ಬರಬೇಕು ಎಂದು ಮಾತುಕತೆ ಆಗಿರುತ್ತದೆ ಎಂದರೆ ಸಾಕ್ಷಿಯು ನುಡಿದಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಕೆ.ಆರ್.ನಗರ.